Mr. SPEAKER.—Very often I am remainding the Government. The Ministers are pulling up their Secretaries to see that as much information as possible is furnished to the House I can assure the House that more and more information will be furnished to the House.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಅಧ್ಯಕ್ಷರೇ ನನ್ನದು ಒಂದು ಪ್ರಶ್ನೆ ಇದೆ, ಅದನ್ನು ತೆಗೆದು ಕೊಳ್ಳಬೇಕು.

ಅಧ್ಯಕ್ಷರು.—ನೀವು ತಡವಾಗಿ ಬಂದದ್ದು ತಪ್ಪು.

Drinking Water Facility in Villages of Belur Taluk

147. SRI B. H. LAKSHMANAIAH (Belur).—Will the Minister for Rural Development and Panchayati Raj be pleased to state :—

(a) the number of villages in Belur Taluk where the drinking water facilities have been provided and yet to be provided ;

(b) the number of drinking water wells and bore wells at present :

(c) the number of bore wells and wells fixed with pullies (ರಾಟೆ ಬಾವಿಗಳು) under use ;

(d) the number of bore wells in the villages where more than one well was dug and failed to get water ;

(e) the number of Harijan Colonies having well and bore wellr facilities and the number of such colonies to be provided with wates facilities ?

SRI K. PRABHAKAR (Minister for Rural Development and Panchayati Raj).—

(a) (1) 336 villages in Belur Taluk have been provided with drinking water facilities.

(2) The remaining 5 villages are to be provided with water facilities i.e., Harijankeri, Koppalu and Janata Housing Colonies.

(b) (1) Drinking water wells	...	463
(2) Bore wells	...	212
(c) (1) Bore wells	...	108
(2) Wells fixed with pullies (ರಾಟೆ ಬಾವಿಗಳು)	...	418

(d) 5 (five).

(e) (1) Drinking water wells	...	242
(2) Bore Wells	...	25

the water facilities have to be provided in 29 Harijan Colonies.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—೨೧೨ ಕೊಳಚೆ ಬಾವಿಗಳಲ್ಲಿಲ್ಲಿ ೧೦೮ ಕೊಳವೆ ಬಾವಿಗಳಂ ಕೆಲಸ ಮಾಡುತ್ತಿವೆ ಎಂಬುದಾಗಿ ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಈ ಕೊಳವೆ ಬಾವಿಗಳು ಇಷ್ಟೊಂದು ಪ್ರಮಾಣದಲ್ಲಿ ಕೆಟ್ಟು ಹೋಗಿರುವುದಕ್ಕೆ ಕಾರಣವೇನು ? ಮತ್ತೆ ಈ ರೀತಿ ಕೆಟ್ಟು ಹೋಗಿರತಕ್ಕಂಥ ಕೊಳವೆ ಬಾವಿಗಳನ್ನು ರಿಪೇರಿ ಮಾಡುವುದಕ್ಕೆ ತಾವು ಏನಾದರೂ ವ್ಯವಸ್ಥೆ ಮಾಡಿದ್ದೀರಾ ? ಈಗ ಕಳೆದ ಒಂದು ವರ್ಷದಿಂದ ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳು ಕೆಟ್ಟು ಹೋಗಿ ತಂಬಾ ತೊಂದರೆಯಾಗಿದೆ. ಇವನ್ನು ರಿಪೇರಿ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ?

† ಶ್ರೀ ಕೆ. ಪ್ರಭಾಕರ್.—ಕೊಳವೆ ಬಾವಿಗಳೂ ಕೂಡ ಯಂತ್ರದ ಹಾಗೆ ಕೆಟ್ಟು ಹೋಗುವುದಕ್ಕೆ ನಾನಾ ಕಾರಣಗಳು ಇವೆ. ಬಹು ಮುಖ್ಯವಾದ ಕಾರಣಗಳು ಯಾವುವು ಎಂಬುದು ಸರ್ಕಾರಕ್ಕೆ ಗೊತ್ತಿದೆ. ಒಂದೊಂದು ಸಲ ಕೊಳವೆ ಬಾವಿಯನ್ನು ಉಪಯೋಗಿಸುವುದಕ್ಕೆ ಬಾರದ ಆದಕ್ಕೆ ಕಲ್ಲು ಮಣ್ಣನ್ನು ತುಂಬುತ್ತಾರೆ. ಯಾವ ರೀತಿ ಆದರ ಕೈ (ಹ್ಯಾಂಡಲ್) ಅನ್ನು ಆಡಿಸಿ ನೀರನ್ನು ತೆಗೆದು ಕೊಳ್ಳಬೇಕೆಂದು ತಿಳಿಯದೇ ಒರಟಾಗಿ ಎಳೆದು ಕೆಟ್ಟಿರುವುದೂ ಉಂಟು. ಜೋರ್ ಪೆಲ್‌ಗಳಲ್ಲಿ ನೀರು ಬರಬೇಕಾದರೆ ಹ್ಯಾಂಡ್ಲನ್ನು ಎಷ್ಟರಮಟ್ಟಿಗೆ ಆನನ್ನು ಎಳೆಯಬೇಕು ಎನ್ನುವುದರಲ್ಲಿ ತರಬೇತಿ ಕೊಡುವುದು ಒಳ್ಳೆಯದು. ಕೆಲವು ಬಾವಿಗಳಲ್ಲಿ ಮೆಕಾನಿಕಲ್ ಡಿಫೆಕ್ಟ್‌ನಿಂದ ಕೆಡುವುದೂ ಉಂಟು. ಇವೆಲ್ಲ ಕಾರಣಗಳು ಇರುವುದರಿಂದ ಕೆಟ್ಟಿರುವ ಬಾವಿಗಳನ್ನು ಸರಿಮಾಡಿಸಿ ಜನರಿಗೆ ತೊಂದರೆ ಬಾರದಂತೆ ಸರ್ಕಾರ ದವರು ಏನು ವ್ಯವಸ್ಥೆ ಮಾಡುತ್ತಾರೆನ್ನುವುದು ಮಾನ್ಯ ಸದಸ್ಯರ ಮನಸ್ಸಿನಲ್ಲಿರುವ ವಿಷಯ. ನಾನು ಮೊದಲಿನ ಪ್ರಶ್ನೆಗೆ ಈಗಾಗಲೇ ಉತ್ತರ ಹೇಳಿದ್ದೇನೆ. ಕೆಟ್ಟು ಹೋಗಿರತಕ್ಕಂಥ ಬಾವಿಗಳನ್ನು ರಿಪೇರಿ ಮಾಡಲು ೧೦ ಯೂನಿಟ್‌ಗಳನ್ನು ಮಾಡಿ ಅವರೆಲ್ಲಿ ಒಬ್ಬೊಬ್ಬ ತಜ್ಞರನ್ನು ಇಟ್ಟು ಮತ್ತು ಟಿ.ಎಚ್.ಇ. ಇಲಾಖೆಯ ಒಬ್ಬರನ್ನು ಬಿ.ಡಿ.ಒ. ಆವರ ಆಧೀನದಲ್ಲಿಟ್ಟು ಎಲ್ಲೆಲ್ಲಿ ಕಂಪ್ಲೆಂಟ್ ಬರುತ್ತದೆ ಆ ಸ್ಥಳಗಳಿಗೆ ಹೋಗಿ ಕೆಲಸ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಬಾವಿಗಳು ಎಲ್ಲೆಲ್ಲಿ ಕೆಟ್ಟು ಹೋಗಿವೆ ಅವುಗಳೆಲ್ಲವನ್ನು ಪಟ್ಟಿ ಮಾಡಿ ಅವನ್ನು ಜಿಲ್ಲಾಧಿಕಾರಿಗಳ ಸಹಾಯದಿಂದ ಮತ್ತು ಬಿ.ಡಿ.ಒ. ರವರ ಸಹಾಯದಿಂದ ಪ್ರತಿಯೊಂದನ್ನೂ ರಿಪೇರಿ ಮಾಡಿಕೊಂಡು ಬರತಕ್ಕಂಥ ವ್ಯವಸ್ಥೆಯಾಗಿದೆ. ನಾನು ಮೊನ್ನೆ ತಾನೆ ಹಾಸನಕ್ಕೆ ಬಂದಿದ್ದಾಗ ಅಲ್ಲಿಯು ಅಧಿಕಾರಿಗಳನ್ನು ಕೇಳಿದಾಗ ಇಂತಿಷ್ಟು ಬಾವಿಗಳು ಕೆಟ್ಟು ಹೋಗಿವೆ, ಅವರಲ್ಲಿ ಇಂತಿಷ್ಟನ್ನು ರಿಪೇರಿ ಮಾಡಲಾಗಿದೆ ಎಂಬುದಾಗಿ ಮಾಹಿತಿ ಕೊಟ್ಟಿದ್ದಾರೆ. ಆದರಲ್ಲೂ ಇನ್ನು ಮೇಲಾದರೂ ಆತಿ ಶೀಘ್ರವಾಗಿ ನೀರಿನ ಕೊರತೆಯನ್ನು ಸರಿ ಮಾಡಬೇಕೆಂದು ಕೆಳಗಿನ ಅಧಿಕಾರಿ ಗಳಿಗೆ ನಿರ್ದೇಶನ ಕೊಟ್ಟು ಆದಷ್ಟು ಬೇಗ ಮಾಡಿಸಿ ಕೊಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಿಂದ ಉಪ ಪ್ರಶ್ನೆಯನ್ನು ಕೇಳಿದ್ದಾರೆ. ತಾವು ಅದಕ್ಕೆ ಉಪ ಉತ್ತರ ಹೇಳಿ.

ಶ್ರೀ ಎಸ್. ಬಿ. ಲಕ್ಷ್ಮಣಯ್ಯ.—ಹರಿಜನ ಕಾಲೋನಿಗಳಲ್ಲಿ ೨೪೨ ರಾಟೆ ಬಾವಿಗಳನ್ನು ತೆಗೆದಿದೆ ಎಂಬುದಾಗಿ ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಆ ರಾಟೆ ಬಾವಿಗಳಲ್ಲಿ ಎಷ್ಟು ಬಾವಿಗಳಲ್ಲಿ ನೀರು ಬಂದಿವೆ ? ಎಷ್ಟು ಬಾವಿಗಳಲ್ಲಿ ಕಂಟ್ಯಾಕ್ಟರ್ ನೀರನ್ನು ಹೊರಗಿನಿಂದ ತಂದು ಸುರಿದು ಫೈನಲ್ ಬಿಲ್ ಮಾಡಿಸಿಕೊಂಡಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬುದನ್ನು ತಿಳಿಸಬೇಕು. ಮತ್ತು ಎಷ್ಟೋ ಬಾವಿಗಳು ಕುಸಿದು ಹೋಗಿವೆ.

ಶ್ರೀ ಕೆ. ಪ್ರಭಾಕರ್. – ನೀರನ್ನು ಸುರಿದು ಬಿಲ್ ಮಾಡಿಸಿರುವ ವಿಷಯಕ್ಕೆ ಸಂಬಂಧಪಟ್ಟಹಾಗೆ ನನ್ನಲ್ಲಿ ಉತ್ತರ ಇಲ್ಲ. ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಕೆಟ್ಟು ಹೋಗಿರತಕ್ಕಂಥ ಬಾವಿಗಳನ್ನು ಸರಿ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ ಎಂಬುದನ್ನು ಈಗಾಗಲೇ ಹೇಳಿದ್ದೇನೆ ಆದಷ್ಟು ಬೇಗ ಸರಿ ಮಾಡಿಸಿಕೊಡುತ್ತೇವೆ.

ಶ್ರೀ ಎಚ್. ಬಿ. ಲಕ್ಷ್ಮಣಯ್ಯ.—೩೫೬ ಹಳ್ಳಿಗಳಿಗೆ ಕುಡಿಯುವ ನೀರಿನ ಸೌಕರ್ಯ ಒದಗಿಸಿದ್ದೇವೆ ಎಂಬುದಾಗಿ ಹೇಳಿದ್ದೀರಿ. ಉಳಿದ ಹಳ್ಳಿಗಳಿಗೆ ಎಷ್ಟು ಕಾಲದಲ್ಲಿ ತಾವು ಕುಡಿಯುವ ನೀರಿನ ಸೌಕರ್ಯ ವನ್ನು ಒದಗಿಸುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಉಳಿದ ಹಳ್ಳಿಗಳಿಗೂ ಇಷ್ಟೇ ಕಾಲದಲ್ಲಿ ಒದಗಿಸುತ್ತೇವೆಂದು ಹೇಳುವುದು ಕಷ್ಟ. ಅವನ್ನು ಜರೂರಾಗಿ ಹೇಳುವಂತಹ ಪ್ರಶ್ನೆಯಲ್ಲ. ಕಾರಣವೇನೆಂದರೆ ವ್ಯವಸ್ಥಿತವಾಗಿ ಒಂದು ಕಡೆಯಿಂದ ಯಾವ ಯಾವ ಗ್ರಾಮಕ್ಕೆ ನೀರು ಇಲ್ಲವೊ ಅಂತಹ ಗ್ರಾಮಗಳಿಗೆ ನೀರನ್ನು ಒದಗಿಸತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಆದಷ್ಟು ಬೇಗ ಇವೆಲ್ಲವನ್ನೂ ಮಾಡಿಸುತ್ತೇವೆ.

ಶ್ರೀ ಎಚ್. ಬಿ. ಲಕ್ಷ್ಮಣಯ್ಯ.—ಕೆಲವು ಗ್ರಾಮಗಳಲ್ಲಿ ಕೊಳವೆ ಬಾವಿ ಮತ್ತು ರಾಟೆ ಬಾವಿಗಳನ್ನು ೨-೩ ಕಡೆ ಹಾಕಿದ್ದೀರಿ. ಆದರೂ ಕೆಲವು ಬಾವಿಗಳಲ್ಲಿ ನೀರು ಬಂದಿಲ್ಲ. ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಆ ರೀತಿ ಬಂದಿದ್ದರೆ ಇಂತಹ ಗ್ರಾಮಗಳಿಗೆ ಗ್ರಾಮಾಂತರ ನೀರು ಸರಬರಾಜು ಯೋಜನೆಯನ್ನು ಮಂಜೂರು ಮಾಡಿ ಕುಡಿಯುವ ನೀರನ್ನು ಒದಗಿಸುತ್ತೀರಾ ?

ಶ್ರೀ ಕೆ. ಪ್ರಭಾಕರ್.—ನಮ್ಮಲ್ಲಿ ೨-೩ ರೀತಿಯ ವ್ಯವಸ್ಥೆಯಿಂದ ನೀರನ್ನು ಒದಗಿಸುತ್ತಿದ್ದೇವೆ. ಯಾವ ಯಾವ ಗ್ರಾಮದಲ್ಲಿ ಯಾವ ರೀತಿ ಮಾಡಿದರೆ ಫಲದಾಯಕವಾಗಿ ನೀರು ಬರುತ್ತದೋ ಆ ವ್ಯವಸ್ಥೆಯನ್ನು ಕಾಯಂ ಮಾಡುತ್ತೇವೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

Reviving the "Zero Hour" in the House and supply of Question-Answer lists to members

SMT. S. PRAMILA (Chamarajpet),—I have sent a notice with regard to Auto-Riksha Drivers' strike.

MR. SPEAKER.—We have not taken up that issue now.

SRI M. V. RAJASHEKHARAN (Uttar halli).—Sir, I understand that the Business Advisory Committee has decided to give a go-by to the 'Zero Hour'. I feel that the 'Zero Hour' is every important in the House. It is like a light in the House. Otherwise, the entire House will be without light and becomes worthless. While we come to the House we will come accross so many incidents which are important in nature. When som thing happens in a day which is of public importance, we have to bring it to the notice of the Government through the speaker. That is why I request the Chair to consider the same and revise it.

My second point is about the power supply from Kerala which has been disrupted. They say that it will be disrupted for a weak or so.

MR. SPEAKER.—Unless I give permission the hon'ble Member can't raise that matter now.

SRI M. V. RAJASHEKHARAN.—That is why I sought your permission.

ಶ್ರಿ ಎಸ್ ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಈ ಜೀರೊ ಅವರ್ ಬಿಸಿನೆಸ್ ಅಡ್ವೈಸರಿ ಕಮಿಟಿಯವರು ಕೈಬಿಟ್ಟಿದ್ದಾರೆ ಎನ್ನುವುದು ಸರಿಯಲ್ಲ. ಅದನ್ನು ನಾವು ಕೈಬಿಡುವ ಪ್ರಶ್ನೆಯೇ ಇಲ್ಲ. ಅದು ಪಾರ್ಲಿಮೆಂಟಿನಲ್ಲಿಯೂ ಇದೆ ಈ ಸಭೆಯಲ್ಲೂ ಇದೆ. ಒಂದಿನ ಪ್ರೊಸೀಡಿಂಗ್ಸ್ ತೆಗೆದು ನೋಡಿದರೆ ತಮಗೆ ಗೊತ್ತಾಗುತ್ತದೆ. ಈ ಬಗ್ಗೆ ನಾನು ನೆನ್ನೆಯ ದಿವಸವೇ ಉದಾಪರಣೆಗಳನ್ನು ಕೊಟ್ಟು ಹೇಳಿದ್ದೇನೆ. ಈಗ ನಾವು ರಸ್ತೆಯಲ್ಲಿ ಬರುತ್ತಾ ಇರುವಾಗ ಒಂದು ಬಿಲ್ಡಿಂಗ್ ಪತ್ತಿಕೊಂಡು ಉರಿಯುತ್ತಿದ್ದರೆ, ಅದರ ಬಗ್ಗೆ ತಕ್ಷಣ ವಿಚಾರ ತಿಳಿಸಬೇಕಾಗುತ್ತದೆ. ಈಗ ನಾವು ರೂಲ್ ೩೧೨ರ ಕೆಳಗೆ ನೋಟಿಸ್ ಕೊಟ್ಟು ಒಂದು ಶಿಸ್ತಿನಿಂದ ಹೋಗುತ್ತಿದ್ದೇವೆ. ಈ ಬಗ್ಗೆ ಸರ್ಕಾರದಿಂದ ೮-೧೦ ದಿವಸಗಳಾದರೂ ಉತ್ತರ ಬರದೇ ಹೋದರೆ ಬಹಳ ಕಷ್ಟವಾಗುತ್ತದೆ. ನಾವು ರೂಲ್ ೩೧೨ರ ಕೆಳಗೆ ನೋಟೀಸ್ ಕೂಡ ಬೇಕಾದರೆ ಬಹಳ ತುರ್ತು ಇದ್ದರೆ ಮಾತ್ರ ಕೊಡುತ್ತೇವೆ. ಇಂಥಾದ್ದಕ್ಕೆ ಒಂದೆರಡು ದಿವಸಗಳಲ್ಲೇ